ದಿನಾಂಕ 14-09-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀಮತಿ ಎನ್.ಎಸ್.ಜೆ ವಕೀಲರಿಂದಃ**

ಗುಣಶೇಖರ ನನ್ನ ಮೈದುನ ಎಂದು ತೋರಿಸಲು ದಾಖಲೆಗಳನ್ನು ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನನ್ನ ಮೈದುನ ಗುಣಶೇಖರ ಸೇರಿ ಅವರು ಒಟ್ಟು 9 ಜನ ಸಹೋದರ ಸಹೋದರಿಯರು, ಅದರಲ್ಲಿ 5 ಜನ ಮರಣ ಹೊಂದಿರುತ್ತಾರೆ. 7 ಜನ ಹೆಣ್ಣು ಮಕ್ಕಳು ಮದುವೆಯಾಗಿ ಅವರ ಗಂಡನ ಮನೆಯಲ್ಲಿ ಇರುತ್ತಾರೆ. ಅದರಲ್ಲಿ 3 ಜನ ಮರಣ ಹೊಂದಿರುತ್ತಾರೆ. ಅವರ ಹೆಸರುಗಳು ನನಗೆ ಸರಿಯಾಗಿ ನೆನಪಿಲ್ಲ. ರಾಣೇಬೆನ್ನೂರಿನಲ್ಲಿ ಪ್ರೇಮ ಎಂಬುವವರು ವಾಸವಾಗಿರುತ್ತಾರೆ. ಅವರ ವಿಳಾಸ ನನಗೆ ತಿಳಿದಿಲ್ಲ. ನಾನು ಪ್ರತಿವಾದಿಯರ ಕುಟುಂಬಕ್ಕೆ ಸೇರದ ಕಾರಣ ಅವರ ಹೆಸರು ವಿಳಾಸಗಳು ತಿಳಿದಿಲ್ಲ ಎಂದರೆ ಸರಿಯಲ್ಲ.

2. ದಾವಾ ಸ್ವತ್ತು ಇರುವ 6 ಮನೆಗಳ ವಿಸ್ತೀರ್ಣ ಎಷ್ಟು ಎಂದರೆ 4 ಗುಂಟೆ ಜಮೀನಿನಲ್ಲಿ ಸಣ್ಣ ಸಣ್ಣದಾದ 6 ಮನೆಗಳು ಇರುತ್ತವೆ. ಸದರಿ ಮನೆಗಳು ಈಗ ಬಿದ್ದುಹೋಗಿದ್ದು ಎಷ್ಟು ವಿಸ್ತೀರ್ಣ ಎಂದು ಹೇಳಲಾಗುವುದಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ಮನೆಗಳಲ್ಲಿನ ಒಂದು ಮನೆಯಲ್ಲಿ ಪ್ರತಿವಾದಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಅವರು ಬೇರೆ ಮನೆಯಲ್ಲಿ ವಾಸವಾಗಿರುತ್ತಾರೆ ಎಂದು ನುಡಿದಿರುತ್ತಾರೆ. ಪ್ರತಿವಾದಿ ಸದರಿ ಮನೆಯಲ್ಲಿ ವಾಸವಾಗಿರುವ ವಿಚಾರ ತಿಳಿದಿದ್ದರೂ ಸಹಿತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಎಂದೂ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ.

3. ನಿಪಿ 1 ರ ದಾಖಲೆಯಲ್ಲಿ ಪ್ರತಿವಾದಿಯ ಹೆಸರು ಇರುತ್ತದೆ ಎಂದರೆ ರುದ್ರಪ್ಪ ಕೊಟ್ರಪ್ಪ ಹೆಸರು ಇರುತ್ತದೆ. ನಿಪಿ 1 ನ್ನು ಸುಮಾರು 9 ವರ್ಷಗಳ ಹಿಂದೆ ನೋಡಿರುತ್ತೇನೆ. ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ವಾಸವಾಗಿದ್ದರಿಂದ ಅವರ ಹೆಸರು ನಿಪಿ 1 ರಲ್ಲಿ ದಾಖಲಾಗಿದೆ ಎಂದರೆ ಸರಿಯಲ್ಲ. ನಿಪಿ 2 ರ ಮರಣ ಪ್ರಮಾಣ ಪತ್ರವನ್ನು ಯಾರು ಕೇಳಿದರೂ ಸಹ

This is a True Copy of the Court Records Online. Authenticated @ districts.ecourtsindia.com/cnr/KAHV520012642014/truecopy/order-5.pdf

www.ecourtsindia.com



ನೀಡುತ್ತಾರೆ ಎಂದರೆ ಸರಿಯಲ್ಲ. ನಿಪಿ 2 ರ ಮರಣ ಪ್ರಮಾಣ ಪತ್ರವನ್ನು ಈ ದಾವೆಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಎಂದಿಗೂ ದಾವಾ ಸ್ವತ್ತಿನಲ್ಲಿ ವಾಸವಿಲ್ಲದ ಕಾರಣ ನಿಪಿ 3 ರಿಂದ 5 ರ ದಾಖಲೆಗಳನ್ನು ಕೊಂಡಜ್ಜಿ ಗ್ರಾಮದ ವಿಳಾಸವನ್ನು ಹೊಂದಿವೆ ಎಂದರೆ ಸರಿಯಲ್ಲ.

4. ಸಾಕ್ಷಿದಾರರಿಗೆ ನಿಪಿ 7 ರ ಪೋಟೋವನ್ನು ತೋರಿಸಲಾಗಿ ಅದರಲ್ಲಿ ಕಾಣುವ ಹಸಿರು ಬಣ್ಣದ ಮನೆಯಲ್ಲಿ ಪ್ರತಿವಾದಿ ವಾಸವಾಗಿರುತ್ತಾಳೆ ಎಂಬ ಸಲಹೆಗೆ ಸಾಕ್ಷಿದಾರರು ಸರಿ ಎಂದು ಒಪ್ಪಿಕೊಳ್ಳುತ್ತಾ ಸದರಿ ಮನೆಗೂ ನಮಗೂ ಸಂಬಂಧವಿಲ್ಲ ಎಂದು ನುಡಿದಿರುತ್ತಾರೆ. ನಿಪಿ 9 ಮತ್ತು 10 ರ ಪೋಟೋಗಳಲ್ಲಿ ಒತ್ತುವರಿ ಮಾಡಿ ಪ್ರತಿವಾದಿಯ ಮನೆಯ ಹಿಂದೆ ಕಟ್ಟಡ ಕಟ್ಟುತ್ತಿರುವ ಪೋಟೋಗಳು ಎಂದರೆ ಅದು ನಮಗೆ ಸಂಬಂಧವಿಲ್ಲ. ಕೊಟ್ರಪ್ಪ ನನ್ನ ಗಂಡ ಅಲ್ಲ ಎಂದರೆ ಸರಿಯಲ್ಲ. ಲೀಲಾವತಿ ಅಂದರೆ ಪ್ರತಿವಾದಿಯು ಸದರಿ ಕೊಟ್ರಪ್ಪನವರ ಕಾನೂನು ಬದ್ದ ಹೆಂಡತಿ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ವಿನಾಃಕಾರಣ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನನಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. C/c. 2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

This is a True Copy of the Court Records Online. Authenticated @ districts.ecourtsindia.com/cnr/KAHV520012642014/truecopy/order-5.pdf